(ಇಂದು ದಿನಾಂಕಃ **27-11-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಸಿ ಬಿ ಕೆ ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಹಾಗೂ 5 ನೇ ಪ್ರತಿವಾದಿಯ ಮದುವೆಯನ್ನು ನನ್ನ ತಂದೆ ನೇರವೇರಿಸಿರುತ್ತಾರೆ ಎಂದರೆ ಸರಿ. ಮದುವೆಯ ನಂತರ ನಾನು ಆಗಾಗ ತವರು ಮನೆಗೆ ಬಂದು ಹೋಗುತ್ತೇನೆ. ಜಮೀನು ಸರ್ವೇ ನಂಃ 898/4 ನ್ನು ನನ್ನ ತಂದೆ ತನ್ನ ಜೀವಿತಾವಧಿಯಲ್ಲಿ ಮನೆಯ ಎಲ್ಲ ಸದಸ್ಯರಿಗೆ ತಿಳಿಸಿ ನನ್ನ ತಾಯಿಯ ಹೆಸರಿನಲ್ಲಿ ಭಕ್ಷೀಸು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿಯವರು ತನ್ನ ಹಿಸ್ಸೆಗೆ ಬಂದ ಕ್ಷೇತ್ರವನ್ನು ಭಕ್ಷೀಸು ಮಾಡಿರುತ್ತಾರೆ ಎಂದರೆ ಸರಿ.

2. ಜಮೀನು ಸರ್ವೇ ನಂಃ 899/2 ಕ್ಷೇತ್ರ 3 ಎಕರೆ 4 ಗುಂಟೆ ಜಮೀನು ಈಗಲೂ ಸಹ ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ವಾದಿಗೆ ಹಾಗೂ ಉಳಿದ ಪ್ರತಿವಾದಿಯರಿಗೆ ಪಾಲು ಇದೆ ಎಂದರೆ ಸರಿ. ನನ್ನ ಸಹೋದರ ನಿಂಗಪ್ಪ ರವರ ಮದುವೆಯನ್ನು ನನ್ನ ತಂದೆ 1 ನೇ ಪ್ರತಿವಾದಿಯೊಂದಿಗೆ ನೇರವೇರಿಸಿರುತ್ತಾರೆ ಎಂದರೆ ಸರಿ. ಮದುವೆಯ ನಂತರ 1 ನೇ ಪ್ರತಿವಾದಿ ಕೆಲ ದಿನಗಳವರೆಗೆ ಮಾತ್ರ ತನ್ನ ಗಂಡನೊಂದಿಗೆ ಉತ್ತಮ ಸಂಸಾರ ನಡೆಸಿದ್ದರು ಎಂದರೆ ಸರಿ. ಮನೆತನದ ಹಿರಿತನವನ್ನು 1 ನೇ ಪ್ರತಿವಾದಿ ಹಾಗೂ ಆತನ ಗಂಡ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಮನೆಯಿಂದ ಆಗಾಗ ಹಣ ತೆಗೆದುಕೊಂಡು ಹೋಗುತ್ತಿದ್ದರು ಎಂದು ಆಕೆಯ ಗಂಡ ತಿಳಿಸಿಸುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ತವರು ಮನೆಗೆ ಹೋದರೆ ಅಲ್ಲಿಯೇ ಇರುತ್ತಿದ್ದು ಗಂಡನ ಮನೆಗೆ ಬರದ ಕಾರಣ ಆಕೆಯ ಗಂಡ ಮನನೊಂದಿದ್ದ ಎಂದರೆ ಸರಿ. ನಮ್ಮ ಕುಟುಂಬವನ್ನು ನಿರ್ವಹಿಸಲು ಸಾಕಾಗುವಷ್ಟು ಆದಾಯ ದಾವಾ ಜಮೀನುಗಳಿಂದ ಬರುತ್ತಿತ್ತು ಎಂದರೆ ಸರಿ. ನಮ್ಮ ಕುಟುಂಬಕ್ಕೆ ಸಾಲ ಮಾಡುವ ಸಂದರ್ಭ ಬಂದಿರಲಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಹಾಗೂ ಆಕೆಯ ಗಂಡ 1 ನೇ ಪ್ರತಿವಾದಿಯ ವೈಯಕ್ತಿಕ ಖರ್ಚುಗಳಿಗಾಗಿ ಸಾಲ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಸಾಲ ಮಾಡಿದ ನಂತರ 1 ನೇ ಪ್ರತಿವಾದಿ ತನ್ನ ತವರು ಮನೆಯಲ್ಲಿ ಇದ್ದು, ಕಾರಣ ಆಕೆಯ ಗಂಡ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆಕೆಯ ಗಂಡ ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ ಎಂದು ನುಡಿದಿರುತ್ತಾರೆ. ಸದರಿ ಆತ್ಮಹತ್ಯೆಯಿಂದ ಸರ್ಕಾರದಿಂದ ರೂ. 5,00,000/- ಪರಿಹಾರದ ಹಣ 1 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸರಿ. ಪರಿಹಾರ ಪಡೆಯುವ ಸಲುವಾಗಿ ಸದರಿಯವನ ಸಾವನ್ನು ರೈತ ಆತ್ಮಹತ್ಯೆ ಎಂದು ತೋರಿಸಲಾಗಿತ್ತು ಎಂದರೆ ಸರಿ. ಸದರಿ ಸಂಪೂರ್ಣ ಹಣವನ್ನು

1 ನೇ ಪ್ರತಿವಾದಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ.

3. ಜಮೀನು ಸರ್ವೇ ನಂಃ 318 ನನ್ನ ತಾಯಿಯ ತಾಯಿಯಿಂದ ಬಂದ ಆಸ್ತಿಯಾಗಿರುತ್ತದೆ. ಕಾರಣ ಸದರಿ ಆಸ್ತಿ ವಾದಿಗೆ ಮಾತ್ರ ಸಂಬಂಧಿಸಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯನ್ನು ವಾದಿಗೆ ಗೊತ್ತಾಗದ ಹಾಗೇ 1 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ವರ್ಗಾಯಿಸಲಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ದಿನಾಂಕಃ 17-07-2019 ರಂದು ಕ್ಯಾನ್ಸರ್ ಕಾಯಿಲೆಯಿಂದ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಕಾಯಿಲೆಯ ಸಂಪೂರ್ಣ ಖರ್ಚು ವೆಚ್ಚವನ್ನು ವಾದಿ ನೋಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಚಿಕಿತ್ಸೆಗಾಗಿ ವಾದಿ ಸಾಲ ಮಾಡಿದ್ದರು ಎಂದರೆ ಸರಿ. ನನ್ನ ತಂದೆ ಜಮೀನು ಸರ್ವೇ ನಂಃ 898/4 ಕ್ಕೆ ಸಂಬಂಧಿಸಿ ವಾದಿಗೆ ದಿನಾಂಕಃ 14-01-2019 ರಂದು ದಾನ ಪತ್ರ ಮಾಡಿದ್ದರು ಎಂದರೆ ಸರಿ. ಸದರಿಯವರು ಜೂನ್-2019 ವರೆಗೆ ನನ್ನ ತಂದೆ ಮಾನಸಿಕ ಹಾಗೂ ದೈಹಿಕವಾಗಿ ಸಧೃಢರಾಗಿರುದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ಮಾಡಿದ್ದ ಸಾಲವನ್ನು ನನ್ನ ತಂದೆ ಹಾಗೂ ತಾಯಿ ಬೇರೆ ಕಡೆ ಸಾಲ ಮಾಡಿ ಹಳೆಯ ಸಾಲವನ್ನು ಮರು ಪಾವತಿಸಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಮದುವೆಯ ನಂತರ ನನ್ನ ತಂದೆ ತಾಯಿಯೊಂದಿಗೆ ಸರಿಯಾದ ಹೊಂದಣಿಕೆ ಇರಲಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಂದೆ ತಾಯಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರ ಶ್ರೀ ಆರ್ ಎಂ ಆರ್ ವಕೀಲರಿಂದಃ**

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**